ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001.
ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ : 02-03-2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಪತ್ರಿಕಾಗೋಷ್ಠಿ<br><br>ಶ್ರೀ ವಿನಯ ಕುಮಾರ್ ಸೊರಕೆ<br>ನಗರಾಭಿವೃದ್ಧಿ ಸಚಿವರು | 03-03-2015<br>ಮಂಗಳವಾರ<br>ಮಧ್ಯಾಹ್ನ<br>12.00 ಗಂಟೆಗೆ | ಸಚಿವರ ಕೊಠಡಿ ಸಂಖ್ಯೆ: 442<br>ನಾಲ್ಕನೇ ಮಹಡಿ<br>ವಿಕಾಸ ಸೌಧ<br>ಬೆಂಗಳೂರು. |

## ಪತ್ರಿಕಾ ಪ್ರಕಟಣೆ

## ಭಾರತೀಯ ವಾಯುಪಡೆ ಆಯ್ಕೆ ರ್‍ಯಾಲಿ

ಬೆಂಗಳೂರು, ಮಾರ್ಚ್ 2 (ಕರ್ನಾಟಕ ವಾರ್ತೆ):

ಭಾರತೀಯ ವಾಯುಪಡೆಯು ಗ್ರೂಪ್ X (ತಾಂತ್ರಿಕ) ಗ್ರೂಪ್ Y (Auto Tech, GTI & IAF (Pol) ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ದಿನಾಂಕ: 22-03-2015 ರಿಂದ 26-03-2015 ರವರೆಗೆ ಬೆಳಗಾವಿಯ ಪಿ.ಬಿ.ರಸ್ತೆಯ ರಂಗಮಂದಿರದ ಕುಮಾರ ಗಂಧರ್ವ ಸಭಾಂಗಣದಲ್ಲಿ (ಎಸ್.ಪಿ. ಆಫೀಸ್ ಹತ್ತಿರ) ರ್‍ಯಾಲಿಯನ್ನು ಆಯೋಜಿಸಲಾಗಿದೆ. ದಿನಾಂಕ: 1-8-1995 ಮತ್ತು 30-11-1998 ರ ನಡುವೆ ಜನಿಸಿರುವ ಕರ್ನಾಟಕ ರಾಜ್ಯದ ಅವಿವಾಹಿತ ಪುರುಷ ಅಭ್ಯರ್ಥಿಗಳು ರ್‍ಯಾಲಿಯಲ್ಲಿ ಭಾಗವಹಿಸಬಹುದು.

ಗ್ರೂಪ್ X (ತಾಂತ್ರಿಕ) ಹುದ್ದೆಗಳಿಗೆ ದಿನಾಂಕ:26-03-2015 ರಂದು ಆಯ್ಕೆ ರ್‍ಯಾಲಿ ನಡೆಯಲಿದೆ. ವಿದ್ಯಾರ್ಹತೆ: ಫಿಸಿಕ್ಸ್, ಮ್ಯಾಥ್ಸ್ ಮತ್ತು ಇಂಗ್ಲೀಷ್ ವಿಷಯಗಳೊಂದಿಗೆ ಪಿ.ಯು.ಸಿ ಅಥವಾ 3 ವರ್ಷದ

ಡಿಪ್ಲೊಮಾದಲ್ಲಿ/ ಎಸ್.ಎಸ್.ಎಲ್.ಸಿ ಪರೀಕ್ಷೆಯ ಇಂಗ್ಲೀಷ್ ವಿಷಯದಲ್ಲಿ ಶೇ 50 ಅಂಕ ಪಡೆದು ಉತ್ತೀರ್ಣರಾಗಿರಬೇಕು.

ಗ್ರೂಪ್ Y (Auto Tech, GTI & IAF (Pol) ಹುದ್ದೆಗಳಿಗೆ ವಿದ್ಯಾರ್ಹತೆ: ಪಿ.ಯು.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಹಾಗೂ ಇಂಗ್ಲೀಷ್ ಅಥವಾ ರಾಜ್ಯ/ಕೇಂದ್ರ ಶೈಕ್ಷಣಿಕ ಮಂಡಳಿಗಳಿಂದ ಅನುಮೋದಿಸಲ್ಪಟ್ಟಿರುವ ಎರಡು ವರ್ಷದ ವೃತ್ತಿಪರ ಶಿಕ್ಷಣದಲ್ಲಿ ಶೇ50 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಭಾರತೀಯ ವಾಯುಪಡೆಯ ವೆಬ್‌ಸೈಟ್ :www.indianairforce.nic.in ನಿಂದ ಪಡೆಯಬಹುದು ಅಥವಾ ನಂ.7 ಏರ್‌ಮೆನ್ ಆಯ್ಕೆ ಕೇಂದ್ರ, ನಂ.1, ಕಬ್ಬನ್ ರಸ್ತೆ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು (ದೂರವಾಣಿ: 080–25592199, ಇ–ಮೇಲ್–co7asc@dataone.in ಅಥವಾ ಹತ್ತಿರದ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರವನ್ನು ಸಂಪರ್ಕಿಸಬಹುದು.

ಬಾಬು/ಎನ್.ಸೌಮ್ಯ

## ರಾಜ್ಯ ವಿಧಾನ ಪರಿಷತ್ ಅಧಿವೇಶನ ಮಾರ್ಚ್ 13 ರಿಂದ :

ಬೆಂಗಳೂರು, ಮಾರ್ಚ್ 2 (ಕರ್ನಾಟಕ ವಾರ್ತೆ):

ಕರ್ನಾಟಕ ವಿಧಾನ ಪರಿಷತ್ ಅಧಿವೇಶನವು ಮಾರ್ಚ್ 13 ರಂದು ಮಧ್ಯಾಹ್ನ 12–30 ಗಂಟೆಗೆ ಸಮಾವೇಶಗೊಳ್ಳಲಿದ್ದು, ಮಾರ್ಚ್ 13 ರಂದೇ 12–30 ಗಂಟೆಗೆ ರಾಜ್ಯ ಆಯವ್ಯಯವು ಮಂಡನೆಯಾಗಲಿದೆ ಎಂದು ರಾಜ್ಯ ವಿಧಾನ ಪರಿಷತ್ ಕಾರ್ಯದರ್ಶಿ ಶ್ರೀ ವಿ. ಶ್ರೀಶ್ ಅವರು ತಿಳಿಸಿದ್ದಾರೆ.

ಮಾರ್ಚ್ 13 ರಂದು ಆರಂಭವಾಗಲಿರುವ ರಾಜ್ಯ ವಿಧಾನ ಪರಿಷತ್‌ನ ಅಧಿವೇಶನವು ಮಾರ್ಚ್ 31 ರವರೆಗೆ ಸಮಾವೇಶಗೊಂಡು ಸರ್ಕಾರಿ ಮತ್ತು ಖಾಸಗಿ ಕಲಾಪಗಳನ್ನು ನಡೆಸಲಿದೆ. ಈ ಅವಧಿಯಲ್ಲಿ ಬರುವ ಶನಿವಾರ ಮತ್ತು ಭಾನುವಾರಗಳಂದು ವಿಧಾನ ಪರಿಷತ್ ಕಲಾಪಗಳು ಇರುವುದಿಲ್ಲ ಎಂದು ಶ್ರೀ ವಿ.ಶ್ರೀಶ್ ಅವರು ತಿಳಿಸಿದ್ದಾರೆ.

ಬಾಬು:ಎನ್.ಸೌಮ್ಯ.

## ಸಾರ್ವಜನಿಕ ವೀಕ್ಷಣೆಗೆ ರಾಷ್ಟ್ರಪತಿಭವನದ ಮೊಘಲ್ ಉದ್ಯಾನವನ

ಬೆಂಗಳೂರು, ಮಾರ್ಚ್ 2 (ಕರ್ನಾಟಕ ವಾರ್ತೆ):

ರಾಷ್ಟ್ರಪತಿ ಭವನದಲ್ಲಿರುವ ಮೊಘಲ್ ಉದ್ಯಾನವನ್ನು ದಿನಾಂಕ: 14–02–2015 ರಿಂದ ಮಾರ್ಚ್ ಮಧ್ಯಭಾಗದವರೆಗೆ ಬೆಳಿಗ್ಗೆ 9.30 ರಿಂದ ಸಂಜೆ 4 ರವರೆಗೆ ಸಾರ್ವಜನಿಕರ ವೀಕ್ಷಣೆಗೆ ತೆರೆಯಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಿದೆ.

ಬಾಬು:ಎನ್.ಸೌಮ್ಯ.